# ಭಾರತದ ಪ್ರಜಾಪ್ರಭುತ್ವ: ಸವಾಲು ಮತ್ತು ಸಮಸ್ಯೆಗಳು

**ಡಾ. ನಾಗರಾಜ್ ಗು. ಹಾವಿನಾಳ**
ಸಹಾಯಕ ಪ್ರಾಧ್ಯಾಪಕರು
ರಾಜ್ಯಶಾಸ್ತ್ರ ವಿಭಾಗ
ಶ್ರೀ ಜ.ತೋ.ಸ.ಪ್ರ.ದ.ಕಾ, ಮುಂಡರಗಿ.

Article Link: https://aksharasurya.com/2023/07/nagaraj-gu-havinal/

ಪ್ರಸ್ತಾವನೆ:

ಭಾರತವು ಜಗತ್ತಿನ ಅತಿದೊಡ್ಡ ಪ್ರಜಾಪ್ರಭುತ್ವ ವ್ಯವಸ್ಥೆ ಹೊಂದಿದೆ. ಭಾರತಕ್ಕೆ ಸಂವಿಧಾನ ರಚನಾ ಸಭೆ ರಚನೆಗೊಂಡ ನಂತರ ಸಭೆಯಲ್ಲಿ ಪ್ರಜಾಪ್ರಭುತ್ವ ವ್ಯವಸ್ಥೆಯ ಕುರಿತು ಆಳವಾದ ಚರ್ಚೆ ಮತ್ತು ಅಭಿಪ್ರಾಯಗಳು ವ್ಯಕ್ತವಾದವು. ಸಂಸದೀಯ ವ್ಯವಸ್ಥೆ, ಅಧ್ಯಕ್ಷಿಯ ವ್ಯವಸ್ಥೆ, ಏಕಾತ್ಮಕ ಪದ್ದತಿ, ಮುಂತಾದ ಮಾದರಿ ಸರಕಾರಗಳ ಬಗ್ಗೆ ಚರ್ಚಾತ್ಮಕ ಸಭೆಗಳು ನಡೆದು ಸಂಸದೀಯ ವ್ಯವಸ್ಥೆಯನ್ನು ಅಳವಡಿಸಿಕೊಳ್ಳಲಾಯಿತು. ಭಾರತ ಸಂವಿಧಾನದಲ್ಲಿನ ಸಂಸದೀಯ ಪ್ರಜಾಪ್ರಭುತ್ವ ವ್ಯವಸ್ಥೆ ಬಗ್ಗೆ ಅಂಬೇಡ್ಕರ್‌ರವರು ವಿವರಿಸುತ್ತಾ ಇದು ಕೇವಲ ರಾಜಕೀಯವಾಗಿ ಸಮಾನ ವಯಸ್ಕ ಮತ ಚಲಾವಣೆಯ ಅಧಿಕಾರ ನೀಡಿರುವ ವ್ಯವಸ್ಥೆ ಮಾತ್ರವಲ್ಲ, ಇದು ರಾಷ್ಟ್ರದಲ್ಲಿನ ಪ್ರತಿಯೊಬ್ಬ ಪ್ರಜೆಯ ರಾಜಕೀಯ, ಆರ್ಥಿಕ ಹಾಗೂ ಸಾಮಾಜಿಕ ಹಿತಾಸಕ್ತಿಗಳನ್ನು ಅಭಿವೃದ್ಧಿಗೊಳಿಸಲು ಪೂರಕವಾದ ಸ್ವಾತಂತ್ರ್ಯ, ಸಮಾನತೆ ಹಾಗೂ ಸಹೋದರತೆಗಳನ್ನು ಒಳಗೊಂಡಿದ್ದು ಅವುಗಳನ್ನು ಯತಾವತ್ತಾಗಿ ಜಾರಿಗೊಳಿಸುವುದೇ ಆಗಿದೆ ಎಂದಿದ್ದಾರೆ. ಸಂವಿಧಾನದ ನಿರ್ಮಾತೃಗಳು ಸುಂದರವಾದ ಪ್ರಜಾಪ್ರಭುತ್ವವನ್ನೇ ನಮ್ಮ ದೇಶಕ್ಕೆ ಅಳವಡಿಸಿದರೂ ಕೂಡ ಹಲವು ಕಾರಣಗಳಿಗಾಗಿ ಪ್ರಜಾಪ್ರಭುತ್ವವು ಅನೇಕ ಸವಾಲು ಮತ್ತು ಸಮಸ್ಯೆಗಳನ್ನು ಎದುರಿಸುತ್ತಿದೆ.

**ಜಾತಿವಾದ:**

ಜಾತಿ ಪದ್ದತಿಯು ಭಾರತೀಯ ಸಾಮಾಜಿಕ ವ್ಯವಸ್ಥೆಯ ಪ್ರತಿಫಲವಾಗಿದೆ. ಶತಶತಮಾನಗಳಿಂದಲೂ ಇದು ಭಾರತೀಯ ಸಾಮಾಜಿಕ, ರಾಜಕೀಯ ಮತ್ತು ಆರ್ಥಿಕ ವ್ಯವಸ್ಥೆಗಳನ್ನು ಕಾಡಿದೆ. ಸಂವಿಧಾನ ಜಾರಿಗೆ ಬಂದಾಗಿನಿಂದ ಭಾರತ ಪ್ರಜಾಪ್ರಭುತ್ವ ವ್ಯವಸ್ಥೆ ಅಳವಡಿಸಿಕೊಂಡರು ಸಹ ಜಾತಿ ಪದ್ಧತಿಯಿಂದ ಹೊರಗೆ

ಬರಲು ಸಾಧ್ಯವಾಗುತ್ತಿಲ್ಲ. ಜಾತಿ ಪದ್ಧತಿಯ ಅಸ್ಪೃಶ್ಯತೆ, ಅಸಮಾನತೆ ಹಾಗೂ ಇತರೆ ಕೆಟ್ಟ ಆಚರಣೆಗಳು, ವ್ಯಕ್ತಿ ಸ್ವಾತಂತ್ರ್ಯ ಮತ್ತು ಸಮಾನತೆಗೆ ಮಾರಕವಾಗಿದೆ. ಸ್ವಾತಂತ್ರ್ಯ, ಸಮಾನತೆ ಅಂಶಗಳಿಲ್ಲದ ವ್ಯವಸ್ಥೆಯು ಪ್ರಜಾಪ್ರಭುತ್ವಕ್ಕೆ ದೊಡ್ಡ ಸವಾಲಾಗಿದೆ. ಚುನಾವಣೆಗಳು ಪ್ರಜಾಪ್ರಭುತ್ವದ ಸೌಂದರ್ಯವಾಗಿದೆ. ಆದರೆ ಪ್ರತಿಯೊಂದು ಚುನಾವಣೆಯಲ್ಲಿ ಜಾತಿ ಪದ್ಧತಿಯಿಂದಾಗಿ ಪ್ರಜಾಪ್ರಭುತ್ವದ ಸೌಂದರ್ಯ ಹಾಳಾಗಿದೆ. ಅತಿಯಾದ ಜಾತಿ ಮೋಹದಿಂದ ಹಲವು ವರ್ಗ ಮತ್ತು ಸಮುದಾಯಗಳ ಹಕ್ಕುಗಳು ಅಪಾಯದಲ್ಲಿವೆ. ಇದು ಭಾರತೀಯ ಪ್ರಜಾಪ್ರಭುತ್ವ ಯಶಸ್ವಿ ಕಾರ್ಯಾಚರಣೆಗೆ ದೊಡ್ಡ ಸಮಸ್ಯೆಯಾಗಿದೆ.

**ಕೋಮುವಾದ:**

ಒಂದು ನಿರ್ದಿಷ್ಟ ವರ್ಗದ ಗುಂಪು ತಮ್ಮ ಧರ್ಮದ ಬಗ್ಗೆ ಹೊಂದಿರುವ ಅತಿಯಾದ ಅಭಿಮಾನ ಹಾಗೂ ಇತರೆ ಧರ್ಮದ ಬಗ್ಗೆ ಹೊಂದಿರುವ ಕೀಳರಿಮೆಯ ಮನೋಭಾವವೇ ಕೋಮುವಾದ. ಬ್ರೀಟಿಷರ ಒಡೆದು ಆಳುವ ನೀತಿ, ಎರಡು ಧರ್ಮಗಳ ನಡುವಿನ ಸೈದ್ಧಾಂತಿಕ ಭಿನ್ನತೆ, ಧರ್ಮಗಳ ನಡುವಿನ ಗಲಾಟೆಗಳು, ತುಷ್ಟಿಕರಣ, ರಾಜಕೀಯ ಹಾಗೂ ಧಾರ್ಮಿಕ ಸಂಘಟನೆಗಳ ತೀವ್ರವಾದ ಭಾರತದಲ್ಲಿ ಕೋಮುವಾದ ಬೆಳೆಯಲು ಕಾರಣವಾದವು. ಭಾರತವು ಹಲವು ವಿಷಯಗಳಲ್ಲಿ ವೈವಿಧ್ಯತೆ ಹೊಂದಿರುವ ದೇಶ. ಈ ದೇಶದ ಪ್ರಜಾಪ್ರಭುತ್ವವನ್ನು ಬಲಾಢ್ಯಗೊಳಿಸಲು ಐಕ್ಯತೆ, ಒಗ್ಗಟ್ಟುಗಳು ಬಹಳ ಮುಖ್ಯ. ಆದರೆ ಕೋಮುವಾದವು ಐಕ್ಯತೆಯನ್ನು ಒಡೆದು, ಪ್ರಜಾಪ್ರಭುತ್ವದ ಆಶಯವನ್ನು ಹಾಳು ಮಾಡುತ್ತಿದೆ. ಇದು ಪ್ರಜಾಪ್ರಭುತ್ವಕ್ಕೆ ಒಂದು ದೊಡ್ಡ ಸಮಸ್ಯೆ ಮತ್ತು ಸವಾಲು ಆಗಿದೆ.

**ದುರ್ಬಲ ನಾಯಕತ್ವ:**

ಭಾರತವು ಸ್ವಾತಂತ್ರ್ಯ ಪಡದೆ ದಿನಗಳಲ್ಲಿ ಗಾಂಧೀ, ನೆಹರು, ಜಯಪ್ರಕಾಶ ನಾರಾಯಣ್, ಲೋಹಿಯಾ, ಅಟಲ್ ಬಿಹಾರಿ ವಾಜಿಪೇಯಿ ಮುಂತಾದ ಅನೇಕ ಮುತ್ಸದ್ದಿ ನಾಯಕರುಗಳನ್ನು ಹೊಂದಿತ್ತು. ಆದರೆ ಇತ್ತೀಚಿನ ದಿನಗಳಲ್ಲಿ ಆ ಸಂಖ್ಯೆ ಕೇವಲ ಬೆರಳಣಿಕೆಯಲ್ಲಿ ಮಾತ್ರ ಇದೆ. ಇತ್ತೀಚಿನ ನಾಯಕತ್ವ ತೋಳ್ಬಲ, ಹಣ, ಜಾತಿ ಮತ್ತು ಧರ್ಮಗಳನ್ನು ಆಧರಿಸಿರುವುದು ವಿಪರ್ಯಾಸವೇ ಸರಿ. ವ್ಯಕ್ತಿ ಪೂಜೆ ಅತಿಯಾದ ನಾಯಕತ್ವದ ಮುತ್ಸದ್ದಿತನ ಮರೆಯಾಗುತ್ತಿದೆ. ರಾಜಕೀಯ

ನಾಯಕತ್ವದ ಕೊರತೆಯು ಪ್ರಜಾಪ್ರಭುತ್ವದ ಯಶಸ್ವಿಗೆ ಒಂದು ದೊಡ್ಡ ಸವಾಲಾಗಿ ಪರಿಣಮಿಸಿದೆ.

**ರಾಜಕೀಯ ಅಪರಾಧೀಕರಣ:**

ರಾಜಕೀಯ ಅಪರಾಧಿಕರಣವು ಚುನಾವಣಾ ಪ್ರಕ್ರಿಯೆಯಲ್ಲಿ ಅಪರಾಧ ಹಿನ್ನಲೆಯುಳ್ಳ ಚುನಾಯಿತ ಪ್ರತಿನಿಧಿಗಳು ಆಯ್ಕೆಯಾಗುವುದನ್ನು ಸೂಚಿಸುತ್ತದೆ. ಹಲವು ಚುನಾಯಿತ ಪ್ರತಿನಿಧಿಗಳು ಕೊಲೆ, ಭ್ರಷ್ಟಾಚಾರ, ಅತ್ಯಾಚಾರ, ಕಳ್ಳತನ ಮುಂತಾದ ಕ್ರಿಮಿನಲ್ ಮೊಕದ್ದಮೆಗಳನ್ನು ಎದುರಿಸುತ್ತಿದ್ದಾರೆ. ಪ್ರಸ್ತುತ ಸಂಸತ್ತಿನ ೨೦೦ಕ್ಕಿಂತ ಹೆಚ್ಚು ಸದಸ್ಯರು ತಮ್ಮ ವಿರುದ್ಧ ನ್ಯಾಯಾಲಯಗಳಲ್ಲಿ ಕ್ರಿಮಿನಲ್ ಮೊಕದ್ದಮೆಗಳನ್ನು ಎದುರಿಸುತ್ತಿದ್ದಾರೆ. ತೋಳ್ಬಲ, ಹಣ, ಅಧಿಕಾರ, ಅಕ್ರಮ ಚುನಾವಣೆಗಳು ಭಾರತದಲ್ಲಿ ರಾಜಕೀಯ ಅಪರಾಧಿಕರಣ ಹೆಚ್ಚಾಗಲು ಕಾರಣವಾದವು. ರಾಜಕೀಯ ಅಪರಾಧಿಕರಣವು ವ್ಯವಸ್ಥೆಯಲ್ಲಿ ನೈತಿಕ ಮೌಲ್ಯಗಳು ಕುಸಿಯುವಂತೆ ಮಾಡುತ್ತದೆ. ಇದು ಪ್ರಜಾಪ್ರಭುತ್ವಕ್ಕೆ ಹಿನ್ನಡೆ ಆಗುತ್ತದೆ. ಅಷ್ಟೇ ಅಲ್ಲದೆ ಉತ್ತಮ ನಾಯಕತ್ವ, ದಕ್ಷ ಆಡಳಿತ, ಪಾರದರ್ಶಕ ನ್ಯಾಯಾಂಗ ಮುಂತಾದ ಅಂಶಗಳಿಗೆ ಧಕ್ಕೆತಂದು ಪ್ರಜಾಪ್ರಭುತ್ವ ವಿರೂಪಗೊಳಿಸುತ್ತದೆ.

**ಮೌಲ್ಯಗಳ ಕುಸಿತ:**

ರಾಜಕೀಯ ಮೌಲ್ಯಗಳ ಕುಸಿತವು ಪ್ರಜಾಪ್ರಭುತ್ವದ ಯಶಸ್ವಿಗೆ ಇರುವ ಇನ್ನೊಂದು ದೊಡ್ಡ ಸಮಸ್ಯೆಯಾಗಿದೆ. ಇತ್ತೀಚಿನ ವರ್ಷಗಳಲ್ಲಿ ಮೌಲ್ಯ ಸಿದ್ಧಾಂತಗಳಿಗಿಂತ ಅಧಿಕಾರ ಹಿಡಿಯುವುದೇ ರಾಜಕೀಯ ಪಕ್ಷಗಳ ಪ್ರಮುಖ ಗುರಿಯಾಗಿದೆ. ಯಾವುದೇ ವ್ಯವಸ್ಥೆ ಕೇವಲ ಕಾನೂನಿನ ಮೂಲಕ ಸರಿ ಹೋಗುವುದಿಲ್ಲ ಇದರ ಜೊತೆಗೆ ಮೌಲ್ಯಗಳು ಬೇಕು. ಪ್ರಸ್ತುತ ಭಾರತದ ಯಶಸ್ವಿ ಪ್ರಜಾಪ್ರಭುತ್ವಕ್ಕೆ ಮೌಲ್ಯಗಳ ಕುಸಿತವು ಒಂದುದೊಡ್ಡ ಸವಾಲಾಗಿದೆ.

**ಪ್ರಾಮುಖ್ಯತೆ ಕಳೆದುಕೊಳ್ಳುತ್ತಿರುವ ಕಲಾಪಗಳು:**

ಭಾರತದ ಪ್ರಜಾಪ್ರಭುತ್ವ ಬಲಾಢ್ಯಗೊಳಿಸುವ ದೃಷ್ಟಿಯಿಂದ ಸಂವಿಧಾನ ನಿರ್ಮಾತೃಗಳು ಸಂಸದೀಯ ವ್ಯವಸ್ಥೆಯಲ್ಲಿ ದ್ವಿಸದನ ಪದ್ಧತಿಯನ್ನು ಅಳವಡಿಸಿದರು. ಲೋಕಸಭೆ ಮತ್ತು ರಾಜ್ಯಸಭೆಗಳ ಕಲಾಪಗಳನ್ನು ಅವಲೋಕಿಸಿದಾಗ ದಿನದಿಂದ ದಿನಕ್ಕೆ ಕಲಾಪಗಳ ಮಹತ್ವ ಕಡಿಮೆ ಆಗುತ್ತಿರುವುದು ಕಂಡು ಬರುತ್ತಿದೆ. ಸದಸ್ಯರು ಬಳಸುವ ಅಸಂಸದೀಯ ಭಾಷೆ, ಕಿರಿಚಾಡುವುದು,

ವೈಯಕ್ತಿಕ ನಿಂದನೆ, ಚೇರುಗಳನ್ನು ಎತ್ತಿ ಬಿಸಾಡುವುದು ಮುಂತಾದ ಚಟುವಟಿಕೆಗಳು ಸದನದ ಘನತೆಯನ್ನು ಹಾಳು ಮಾಡುತ್ತಿದೆ. ಇದರಿಂದ ಕಲಾಪಗಳ ನಿಜವಾದ ಉದ್ದೇಶ ಈಡೇರುವುದಿಲ್ಲ. ಇದು ಕೂಡ ಯಶಸ್ವಿ ಪ್ರಜಾಪ್ರಭುತ್ವಕ್ಕೆ ಮಾರಕವಾಗಿದೆ.

**ಮುಕ್ತ ಹಾಗೂ ನ್ಯಾಯಸಮ್ಮತ ಚುನಾವಣೆಗಳ ಕೊರತೆ:**

ಭಾರತದಲ್ಲಿ ಮುಕ್ತ ಹಾಗೂ ನ್ಯಾಯ ಸಮ್ಮತ ಚುನಾವಣೆಗಳನ್ನು ನಡೆಸುವ ಉದ್ದೇಶದಿಂದ ೧೯೫೦ರಲ್ಲಿ ಚುನಾವಣಾ ಆಯೋಗವನ್ನು ಸ್ಥಾಪಿಸಲಾಯಿತು. ಜೊತೆಗೆ ಸಂವಿಧಾನಿಕ ಅಧಿಕಾರಿಗಳನ್ನು ನೀಡಲಾಗಿದೆ. ಇವುಗಳನ್ನು ಬಳಸಿ ಚುನಾವಣಾ ಆಯೋಗವು ಎಷ್ಟೇ ಶಿಸ್ತು ಬದ್ಧವಾಗಿ ಚುನಾವಣೆಗಳನ್ನು ನಡೆಸಿದರು ಸಹ ಇನ್ನುವರೆಗೂ ಸಂಪೂರ್ಣವಾಗಿ ಹಣಬಲ, ಜಾತಿಬಲ, ದ್ವೇಷದ ಭಾಷಣಗಳು, ತೋಳ್ಬಲ, ಮಧ್ಯಪಾನದ ಪ್ರಾಬಲ್ಯ ಮುಂತಾದವುಗಳನ್ನು ತಡೆಯಲು ಯಶಸ್ವಿಯಾಗಿಲ್ಲ. ಇದರಿಂದ ನ್ಯಾಯ ಸಮ್ಮತ ಹಾಗೂ ಮುಕ್ತ ಚುನಾವಣೆಗಳನ್ನು ನಡೆಸುವುದು ಕಷ್ಟವಾಗಿದೆ. ಇದು ಕೂಡ ಪ್ರಜಾಪ್ರಭುತ್ವದ ಮುಂದಿರುವ ಒಂದು ದೊಡ್ಡ ಸವಾಲು ಮತ್ತು ಸಮಸ್ಯೆಯಾಗಿದೆ.

**ಭಯೋತ್ಪಾದನೆ:**

ಜನರಲ್ಲಿ ಮತ್ತು ಸರಕಾರಗಳಲ್ಲಿ ತಮ್ಮ ಕೃತ್ಯಗಳ ಮೂಲಕ ಭಯ ಹುಟ್ಟಿಸಿ ತಮ್ಮ ಗುರಿ ಮತ್ತು ಉದ್ದೇಶಗಳನ್ನು ಈಡೇರಿಸಿಕೊಳ್ಳುವುದೇ ಭಯೋತ್ಪಾದನೆ ಆಗಿದೆ. ಪ್ರಾದೇಶಿಕ ಅಸಮತೋಲನ, ಬಡತನ, ಜನಾಂಗೀಯವಾದ, ಧರ್ಮದ ಬಗೆಗಿನ ಹುಚ್ಚು ಪ್ರೇಮ ಮುಂತಾದವುಗಳ ಕಾರಣಕ್ಕಾಗಿ ಭಯೋತ್ಪಾದನೆ ಹುಟ್ಟಿಕೊಂಡಿದೆ. ಭಯೋತ್ಪಾದನಾ ಸಂಘಟನೆಗಳು ತಮ್ಮ ಕೃತ್ಯಗಳ ಮೂಲಕ ಸಂವಿಧಾನದ ಚೌಕಟ್ಟು ಮೀರಿ ವರ್ತಿಸುತ್ತಿದೆ. ಇದರಿಂದ ಪ್ರಜಾಪ್ರಭುತ್ವದ ಮೂಲ ಉದ್ದೇಶಕ್ಕೆ ಧಕ್ಕೆಯಾಗಿದೆ. ಮಾನವ ಹಕ್ಕುಗಳ ಉಲ್ಲಂಘನೆ, ಚುನಾವಣೆ ಮತಗಟ್ಟೆಗಳ ಮೇಲೆ ದಾಳಿ, ಅಪಹರಣ ಮುಂತಾದವುಗಳು ಪ್ರಜಾಪ್ರಭುತ್ವಕ್ಕೆ ದೊಡ್ಡ ತಲೆನೋವಾಗಿ ಪರಿಣಮಿಸಿದೆ.

**ಸಮಾರೋಪ:**

ಭಾರತದ ಪ್ರಜಾಪ್ರಭುತ್ವವು ನಿರಂತರ ಬದಲಾವಣೆಗೆ ಹೊಂದಿಕೊಳ್ಳುವ ಒಂದು ವಿಶೇಷ ಸ್ವಭಾವ ಹೊಂದಿದೆ. ಮೇಲಿನ ಸವಾಲು ಮತ್ತು ಸಮಸ್ಯೆಗಳ

ಜೊತೆಗೆ ಲಿಂಗತಾರತಮ್ಯ, ಸಾಮಾಜಿಕ ನ್ಯಾಯ ಅನುಷ್ಠಾನದ ಕೊರತೆ, ರಾಜಕೀಯ ಪ್ರಜ್ಞೆಯ ಕೊರತೆ, ರಾಜಕೀಯ ಭದ್ದತೆ ಇಲ್ಲದಿರುವ ರಾಜಕಾರಣಿಗಳು ಮುಂತಾದ ಇನ್ನೂ ಅನೇಕ ಸಮಸ್ಸೆಗಳನ್ನು ಭಾರತದ ಪ್ರಜಾಪ್ರಭುತ್ವ ವ್ಯವಸ್ಥೆ ಎದುರಿಸುತ್ತಿದೆ. ಈ ಎಲ್ಲಾ ಸಮಸ್ಯೆಗಳನ್ನು ನಿವಾರಿಸಲು ಪ್ರತಿಯೊಬ್ಬ ಪ್ರಜೆಯು ರಾಜಕೀಯ ಮೌಲ್ಯಗಳನ್ನು ಬೆಳೆಸಿಕೊಂಡು, ಜವಾಬ್ದಾರಿಗಳನ್ನು ನಿರ್ವಹಿಸಿಕೊಂಡು ಹೋಗುವ ಅವಶ್ಯಕತೆ ಇದೆ. ಪ್ರತಿಯೊಂದು ರಾಜಕೀಯ ಪಕ್ಷಗಳು, ಬದ್ದತೆ ಮೇರೆಗೆ ಕಾರ್ಯನಿರ್ವಹಿಸಬೇಕು. ಧಾರ್ಮಿಕ, ಸಾಮಾಜಿಕ ಸಂಘಟನೆಗಳು, ಒತ್ತಡ ಗುಂಪುಗಳು ಹಾಗೂ ಇತರೆ ಸಂಘ–ಸಂಸ್ಥೆಗಳ ಪ್ರಜಾಪ್ರಭುತ್ವದ ತತ್ವಗಳಿಗೆ ಅನುಗುಣವಾಗಿ ನಡೆದುಕೊಂಡಾಗ ಮಾತ್ರ ದೇಶ ಯಶಸ್ವಿ ಪ್ರಜಾಪ್ರಭುತ್ವ ಹೊಂದಲು ಸಾಧ್ಯವಾಗುತ್ತದೆ.

## References


1. Johari ; J.C : Indian Government and Politics, Sterling publication(Pvt) Ltd, New Delhi, 1984.
2. Laski H.J : Parlimentary Government in England, 8th Edition , S.chand Publication , New Delhi, 1979.
3. Palmer N.D : Indian Political System, Moughton Mifflin Publishers, 1961.
4. Khan M.G : Challenges to Indian Federal System , Third Concept , Dharwad, 1997.
5. Rajashekar H.M : Indian Government and Politics, Kiran Publications, 9th Edition ,Mysore, 2006.